# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-2248/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 03/04/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ವಿಜಯ್ ಕುಮಾರ್.ಎನ್, ನೂರಾಲ್‌ಬೆಟ್ಟು, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ವಿಜಯ ಕುಮಾರ್.ಎನ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಈದು ಗ್ರಾಮದ ಹೊಸ್ಮಾರಿನ ಶ್ರೀಮತಿ ಸುಂದರಿ ಎಂ. ಬಂಗೇರ ಇವರು ತಮ್ಮ ಸ್ವಂತ ಸ್ಥಳವಾದ ಸರ್ವೇ ನಂ.361/2ಬಿಯಲ್ಲಿ ಮನೆ ಕಟ್ಟಲು ಪಂಚಾಯತಿ ವತಿಯಿಂದ ಪರವಾನಗೆ ಪಡೆದಿದ್ದು, ಅದರಂತೆ, ಸದರಿ ಜಾಗದಲ್ಲಿ ಮನೆಯನ್ನು ನಿರ್ಮಿಸದೇ ಸದರಿ ಸ್ಥಳಕ್ಕೆ ಹೊಂದಿಕೊಂಡಿರುವ ಸರ್ಕಾರಿ ಜಮೀನಿನಲ್ಲಿ ಕಾನೂನುಬಾಹಿರವಾಗಿ ಮನೆ ಕಟ್ಟಿರುತ್ತಾರೆಂದು, ಸದರಿ ಕಟ್ಟಡಕ್ಕೆ ಮನೆ ನಂಬರ್ ನೀಡುವ ಬಗ್ಗೆ ದಿನಾಂಕ 28/01/2014 ರಂದು ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ನಿರ್ಣಯವನ್ನು ತೆಗೆದುಕೊಂಡಿರುತ್ತಾರೆ. ಆದರೆ, ಸದರಿ ಜಮೀನನ್ನು ಬಾಲಭವನ ನಿರ್ಮಾಣದ ಬಗ್ಗೆ ಕಾಯ್ದಿರಿಸಬೇಕೆಂದು ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದ್ದು, ಈ ಹಿನ್ನೆಲೆಯಲ್ಲಿ ಸದರಿ ಕಟ್ಟಡಕ್ಕೆ ಮನೆ ನಂಬರ್ ಎದುರುದಾರರು ನೀಡಿರುತ್ತಾರೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಹಾಗೂ ಸರ್ಕಾರಿ ಜಮೀನನ್ನು ಬಾಲಭವನ ನಿರ್ಮಾಣಕ್ಕೆ ಕಾಯ್ದಿರಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ

ದಿನಾಂಕ 28/01/2014 ರಂದು ಮೇಲೆಹೇಳಿದ ವಿವಾದಿತ ಕಟ್ಟಡಕ್ಕೆ ಕಟ್ಟಡ ನಂಬರ್ ನೀಡುವಂತೆ ಸರ್ವಾನುಮತದಿಂದ ನಿರ್ಣಯಿಸಲಾಗಿರುತ್ತದೆ. ನಂತರ ಸದರಿ ಶ್ರೀಮತಿ ಸುಂದರಿಯವರಿಗೆ ನೋಟೀಸನ್ನು ನೀಡಿ ಅವರು ಕಟ್ಟುತ್ತಿರುವ ಮನೆಯ ಜಾಗಕ್ಕೆ ಭೂ ಪರಿವರ್ತನೆ ಆದೇಶ ಪಡೆಯಲಾಗಿದೆಯೇ ಎನ್ನುವ ಬಗ್ಗೆ ಉತ್ತರ ಕೋರಿದ್ದು, ಅದಕ್ಕೆ ಸದರಿಯವರು ನಿರ್ಮಾಣ ಮಾಡಿದ ಸ್ಥಳಕ್ಕೆ ಭೂ ಪರಿವರ್ತನಾ ಆದೇಶ ಪಡೆಯಲಾಗಿರುತ್ತದೆ ಎಂದು ತಿಳಿಸಿ ಉತ್ತರ ನೀಡಿರುತ್ತಾರೆ. ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಆದ್ದರಿಂದ, ತಾನು ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯ ತೀರ್ಮಾನದಂತೆ ಕ್ರಮ ಕೈಗೊಂಡಿರುವುದಾಗಿ ತಿಳಿಸಿರುತ್ತಾರೆ.

3. ಸದರಿ ಎದುರುದಾರರ ಆಕ್ಷೇಪಣೆಯ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಶ್ರೀಮತಿ ಸುಂದರಿಯವರು ಸರ್ಕಾರಿ ಜಾಗದಲ್ಲಿ ಮನೆ ಕಟ್ಟಿರುತ್ತಾರೆ. ಈ ಬಗ್ಗೆ ತಾವು ತಮ್ಮ ತಕರಾರನ್ನು ಪಂಚಾಯತಿಗೆ ಸಲ್ಲಿಸಿದಾಗ, ಎದುರುದಾರರು ವಿವಾದಿತ ಮನೆ ಸ್ಥಳವನ್ನು ಸರ್ವೆ ಮೂಲಕ ಅಳತೆ ಮಾಡಿಸಿ ತಹಶೀಲ್ದಾರ್‌ರವರಿಂದ ಹಾಗೂ ಸರ್ವೆ ಇಲಾಖೆಯಿಂದ ವರದಿ ಪಡೆಯಬೇಕಾಗಿದ್ದು, ಆದರೆ, ಎದುರುದಾರರು ಕಾನೂನುಬಾಹಿರವಾಗಿ ಶ್ರೀಮತಿ ಸುಂದರಿ ಎಂ. ಬಂಗೇರ ರವರಿಗೆ ಅನುಕೂಲವಾಗುವಂತೆ ಕಾನೂನುಬಾಹಿರವಾಗಿ ಪರವಾನಗೆ ಹಾಗೂ ಡೋರ್ ನಂಬರ್ ಅನ್ನು ನೀಡಿರುತ್ತಾರೆ ಎಂದು ತಿಳಿಸಿರುತ್ತಾರೆ.

4. ಈ ಹಂತದಲ್ಲಿ ಪ್ರಕರಣದ ತನಿಖೆಯನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಉಡುಪಿಯ ಪೊಲೀಸ್ ಉಪಾಧೀಕ್ಷಕರಿಗೆ ವಹಿಸಿದ್ದು, ತನಿಖಾಧಿಕಾರಿಯವರು ತಮ್ಮ ತನಿಖಾ ವರದಿಯನ್ನು ಸಲ್ಲಿಸಿ, ಶ್ರೀಮತಿ ಸುಂದರಿ ಎಂ. ಬಂಗೇರ ರವರು ನಿರ್ಮಿಸಿದ ಮನೆಯು ಹೆಚ್ಚಿನ ಭಾಗ ಈದು ಗ್ರಾಮದ ಸರ್ವೆ ನಂ.202/3 ರಲ್ಲಿಯೇ ಉಳಿದ ಸ್ವಲ್ಪ ಭಾಗ ಶ್ರೀ ಶಂಕರ್ ನಾರಾಯಣ ಮಯ್ಯ ಇವರಿಗೆ ಸೇರಿದ ಪಟ್ಟಾ ಸರ್ವೆ ನಂ. 202/11 ರಲ್ಲಿ ಕಟ್ಟಿರುತ್ತಾರೆಂದು ತಹಶೀಲ್ದಾರ್, ಕಾರ್ಕಳ ರವರು ನಕ್ಷೆ ಸಮೇತ ವರದಿ ನೀಡಿರುತ್ತಾರೆಂದು ತಿಳಿಸಿರುತ್ತಾರೆ. ಹಾಗೂ ಸರ್ಕಾರಿ ಜಾಗದಲ್ಲಿ ಮನೆ ಕಟ್ಟಡ ನಿರ್ಮಾಣ ಮಾಡಿರುವ ವಿಚಾರ ಈದು ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಶ್ರೀ ಧರ್ಮೇಂದ್ರ ಕುಮಾರ್ ರವರಿಗೆ ದಿ:07/09/2012 ರ ಸಾಮಾನ್ಯ ಸಭೆಯಲ್ಲಿಯೇ ನಿರ್ಣಯಕ್ಕೆ ಬಂದಿದ್ದರೂ ಕೂಡ, ಸದರಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಕಾರ್ಕಳ ತಾಲ್ಲೂಕಿನ ತಹಶೀಲ್ದಾರ್‌ರವರಿಂದಾಗಲೀ, ಗ್ರಾಮ ಕರಣೀಕರಿಂದಾಗಲೀ ಸದರಿ ಜಾಗವು ಸರ್ಕಾರಿ ಜಾಗವೋ ಅಥವಾ ಪಟ್ಟಾ ಜಾಗವೋ ಎಂಬ ಬಗ್ಗೆ ದೃಢೀಕರಿಸಿಕೊಳ್ಳಲು ವರದಿಯನ್ನು ಪಡೆಯದೇ ದೂರುದಾರ ಗ್ರಾಮ ಪಂಚಾಯತಿ ಸದಸ್ಯರ ಆಕ್ಷೇಪಣೆ ನಡುವೆಯೂ ಶ್ರೀಮತಿ ಸುಂದರಿ ಎಂ. ಬಂಗೇರ ರವರ ಸೊಸೆ ಗ್ರಾಮ ಪಂಚಾಯತಿ ಸದಸ್ಯೆಯಾದ

ಶ್ರೀಮತಿ ಲಾವಣ್ಯ ಇವರ ಒತ್ತಾಯದ ಮೇರೆಗೆ ಮನೆ ನಂಬರ್ 3/85 ಅನ್ನು ನೀಡಿರುವುದು ಸ್ಪಷ್ಟ ಪಟ್ಟಿರುತ್ತದೆಂದು ಆದ್ದರಿಂದ, ಎದುರುದಾರರು ಕರ್ತವ್ಯಲೋಪವೆಸಗಿರುವುದು ದೃಡಪಟ್ಟಿರುತ್ತದೆ ಎಂದು ತಿಳಿಸಿರುತ್ತಾರೆ.

5. ದೂರಿನಂಶಗಳನ್ನು, ಎದುಥುದಾರರ ಆಕ್ಷೇಪಣೆಯನ್ನು ತನಿಖಾಧಿಕಾರಿಯವರ ವರದಿಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಯನ್ನು ಪರಿಶೀಲಿಸಿದಲ್ಲಿ ತಹಶೀಲ್ದಾರ್, ಕಾರ್ಕಳ ರವರು ದಿ:18/01/2016 ರಂದು ನೀಡಿರುವ ವರದಿಯ ಆಧಾರದ ಮೇಲೆ ಶ್ರೀಮತಿ ಸುಂದರಿ ಎಂ ಬಂಗೇರ ಇವರು ಮೇಲೆ ಹೇಳಿದ ವಿವಾದಿತ ಮನೆಯನ್ನು ಸರ್ವೇ ನಂ.202/3 ರ ಸರ್ಕಾರಿ ಜಾಗದಲ್ಲಿ ಹಾಗೂ ಸರ್ವೇ ನಂ.202/11 ರ ಪಟ್ಟಾ ಸ್ಥಳದಲ್ಲಿ ಕಟ್ಟಿರುವುದು ದೃಢಪಡುತ್ತದೆ (ಸದರಿ ತಹಶೀಲ್ದಾರ್ ರವರ ವರದಿಯನ್ನು ಹಾಗೂ ಅದರೊಡನೆ ಅಡಕ ಮಾಡಿರುವ ಸರ್ವೇ ನಕಾಶೆಯನ್ನು ಹಾಜರುಪಡಿಸಲಾಗಿದೆ). ಗ್ರಾಮ ಪಂಚಾಯತಿ ವತಿಯಿಂದ ಶ್ರೀಮತಿ ಸುಂದರಿ ಯವರಿಗೆ ನೋಟೀಸ್ ಅನ್ನು ದಿ:07/09/2012 ರಂದು ನೀಡಿದ್ದು, ಅದರಲ್ಲಿ ವಿವಾದಿತ ಕಟ್ಟಡವನ್ನು ಸರ್ಕಾರಿ ಜಾಗದಲ್ಲಿ ಕಟ್ಟಿರುವ ಬಗ್ಗೆ ದೂರು ಬಂದಿದ್ದು, ಸಂಬಂಧಪಟ್ಟ ಇಲಾಖೆಯಿಂದ ಗಡಿ ಗುರುತಿನ ದೃಢೀಕರಣ ಬರುವವರೆಗೂ ಕಟ್ಟಡದ ಕಾಮಗಾರಿಯನ್ನು ಸ್ಥಗಿತಗೊಳಿಸತಕ್ಕದ್ದು, ತಪ್ಪಿದಲ್ಲಿ ಪರವಾನಗೆಯನ್ನು ರದ್ದುಗೊಳಿಸಲಾಗುವುದೆಂದು ತಿಳಿಸಲಾಗಿರುತ್ತದೆ. ಸದರಿ ನೋಟೀಸ್ ಅನ್ನು ಪಂಚಾಯತಿ ಅಭಿವೃದ್ದಿ ಅಧಿಕಾರಿಯಾದ ಎದುರುದಾರರಾದ ಶ್ರೀ ಧಮೇಂದ್ರ ಬಿ.ಆರ್ ರವರೆ ನೀಡಿರುತ್ತಾರೆ. ನಂತರ ಗ್ರಾಮ ಸಭಾ ಪಂಚಾಯತಿಯ ನಿರ್ಣಯದಲ್ಲಿ ಶ್ರೀಮತಿ ಸುಂದರಿ ರವರಿಗೆ ಕಾಮಗಾರಿಯನ್ನು ಸ್ಥಗಿತಗೊಳಿಸಲು ನೋಟೀಸ್ ನೀಡಿ ವಿಷಯವನ್ನು ಮಾನ್ಯ ತಹಶೀಲ್ದಾರ್ ರವರ ಗಮನಕ್ಕೆ ತಂದು ಸದರಿ ಕಟ್ಟಡ ನಿರ್ಮಿಸುತ್ತಿರುವ ಜಾಗವು ಸರ್ಕಾರಿ ಸ್ಥಳವಾದಲ್ಲಿ ಅದನ್ನು ತೆರವುಗೊಳಿಸಿ, ಸದರಿ ಜಾಗವನ್ನು ಬಾಲಭವನಕ್ಕೆ ಕಾಯ್ದಿರಿಸುವಂತೆ ಕೋರಿ ಪತ್ರ ಬರೆಯಲು ಸೂಚಿಸಿರುವುದು ಕಂಡು ಬರುತ್ತದೆ. (ಸದರಿ ನಿರ್ಣಯದ ಪ್ರತಿಯನ್ನು ಹಾಜರುಪಡಿಸಲಾಗಿದೆ). ತಹಶೀಲ್ದಾರ್‌ರವರಿಗೆ ಗ್ರಾಮ ಪಂಚಾಯತಿ ಅಧ್ಯಕ್ಷರು ಪತ್ರ ಬರೆದು, ಸದರಿ ಸ್ಥಳವನ್ನು ಬಾಲಭವನಕ್ಕೆ ಕಾಯ್ದಿರಿಸುವಂತೆ ಕೋರಿರುತ್ತಾರೆ. (ಸದರಿ ಪತ್ರವನ್ನು ಹಾಜರುಪಡಿಸಲಾಗಿದೆ). ಇದಲ್ಲದೇ, ಶ್ರೀಮತಿ ಸುಂದರಿ ರವರು ತಾನು ಕಟ್ಟಡವನ್ನು ಸರ್ವೇ ನಂ.361 ರಲ್ಲಿ ಕಟ್ಟುವುದಾಗಿ ತಿಳಿಸಿ ಸರ್ವೇ ನಂ.202/3 (ಸರ್ಕಾರಿ ಜಾಗ) ಹಾಗೂ 202/11 (ಪಟ್ಟ ಜಾಗದಲ್ಲಿ) ಮನೆ ಕಟ್ಟುತ್ತಿರುವ ಬಗ್ಗೆ ದೂರುದಾರರಿಂದ ಆಕ್ಷೇಪಣೆ ಬಂದಿದ್ದರೂ ಸಹ, ಮೇಲೆ ತಿಳಿಸಿದಂತೆ ಎದುರುದಾರರು ಸದರಿ ಶ್ರೀಮತಿ ಸುಂದರಿ ಇವರ ಕಟ್ಟಡ ರಚನೆಗೆ ಅವರಿಗೆ ನೀಡಲಾಗಿದ್ದ ನೋಟೀಸ್‌ನಲ್ಲಿ ತಿಳಿಸಿದಂತೆ ಮುಂದಿನ ಕ್ರಮವನ್ನು ಕೈಗೊಳ್ಳದೇ ಅಂದರೇ ಕಟ್ಟಡವನ್ನು ತೆರವುಗೊಳಿಸಲು

ಕ್ರಮ ಕೈಗೊಳ್ಳದೇ ಸದರಿ ಶ್ರೀಮತಿ ಸುಂದರಿಯವರು ಕಟ್ಟಡವನ್ನು ಸರ್ಕಾರಿ ಜಾಗದಲ್ಲಿ ಕಟ್ಟುತ್ತಿದ್ದರೂ ಅವರ ಕಟ್ಟಡದ ರಚನೆಯನ್ನು ನಿಲ್ಲಿಸದೇ, ಅವರಿಗೆ ಕಟ್ಟಡವನ್ನು ಪೂರ್ಣಗೊಳಿಸಲು ಅನುಕೂಲ ಮಾಡಿಕೊಟ್ಟು, ಕಟ್ಟಡದ ನಂಬರ್ ಅನ್ನು ಸಹ ನೀಡಿರುತ್ತಾರೆ.

6. ಎದುರುದಾರರು ತಾನು ಪಂಚಾಯತಿ ನಿರ್ಣಯದಂತೆ ಕ್ರಮ ಜರುಗಿಸಿರುವುದಾಗಿ ತಿಳಿಸಿ ಪ್ರತಿ ರಕ್ಷಣೆಯನ್ನು ತೆಗೆದುಕೊಂಡಿರುತ್ತಾರೆ. ಆದರೆ, ಸದರಿ ಶ್ರೀಮತಿ ಸುಂದರಿಯವರು ಅಕ್ರಮವಾಗಿ ಕಟ್ಟಡ ರಚನೆ ಮಾಡುತ್ತಿರುವುದು ಕಂಡು ಬಂದಿದ್ದರೂ ಹಾಗೂ ಸದರಿ ಶ್ರೀಮತಿ ಸುಂದರಿಯವರ ಪರವಾಗಿ ಪಂಚಾಯತಿ ನಿರ್ಣಯ ಕೈಗೊಂಡಿರುವುದು ಕಾನೂನುಬಾಹಿರವೆಂದು ತಿಳಿದಿದ್ದರೂ, ಎದುರುದಾರರು ಸದರಿ ನಿರ್ಣಯಗಳನ್ನು ತಾಲ್ಲೂಕು ಪಂಚಾಯತಿಗೆ ಕಳುಹಿಸಿ ಸದರಿ ನಿರ್ಣಯಗಳನ್ನು ರದ್ದುಪಡಿಸಲು ಕ್ರಮ ಜರುಗಿಸಿರುವುದಿಲ್ಲ.

7. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಮೇಲೆ ಹೇಳಿದ ಸರ್ಕಾರಿ ಜಾಗದಲ್ಲಿ ನಿರ್ಮಿಸಿರುವ ಅಕ್ರಮ ಕಟ್ಟಡವನ್ನು ತೆರವುಗೊಳಿಸಲು ಕಾನೂನು ರೀತ್ಯ ಕ್ರಮ ಜರುಗಿಸಿ, ಸದರಿ ಸರ್ಕಾರಿ ಜಾಗವನ್ನು ಸರ್ಕಾರದ ಸುಪರ್ಧಿಗೆ ಪಡೆಯಲು ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

3/4/17

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 03/4/17